ಕೆಲವು ಮನೆಗಳಲ್ಲಿ ಷೋಕಿಗಾಗಿ ಫಾರಿನ್ನು ತಳಿಯ ನಾಯಿಗಳನ್ನು ಸಾಕುವವರ ಬಗ್ಗೆಯಂತೂ ಅವುಗಳ ಅಸಮಾಧಾನ ಮಡುಗಟ್ಟಿ ಕುಳಿತಿದೆ. ತಮಗೆ ಸಿಗದ ಸವಲತ್ತು ಸೌಕರ್ಯಗಳನ್ನು ಸಾವಿರಾರು ರೂಪಾಯಿ ಬೆಲೆಬಾಳುವ ಈ ಚಪ್ಪಟೆ ಮುಖದ ಈ ಜಾತಿ ನಾಯಿಗಳು ಕಿತ್ತುಕೊಂಡಿರುವುದನ್ನು ಅವು ಸೂಕ್ಷ್ಮವಾಗಿ ಅರ್ಥ ಮಾಡಿಕೊಂಡಿವೆ. ಈ ಬಗ್ಗೆ ಶ್ವಾನ ಸಭೆಗಳಲ್ಲಿ ಹಲವಾರು ಸಿಟಿಂಗುಗಳಾಗಿವೆ, ಮಾತುಕತೆಗಳಾಗಿವೆ. ಎಲ್ಲಿಯಾದರೂ ಅವು ಕಂಡರೆ ಕಚ್ಚಿ ಕಚ್ಚಿ ಅವುಗಳನ್ನು ಗಾಯಗೊಳಿಸುವುದಕ್ಕೆ ಸಿದ್ಧತೆಗಳು ನಡೆದಿವೆ. ಇನ್ನು ಕೆಲವು ರಸಿಕ ನಾಯಿಗಳಂತೂ ಭಿನ್ನ ತಳಿಯ ಆ ಹೆಣ್ಣು ನಾಯಿಗಳನ್ನು ಮೆತ್ತಗೆ ತಮ್ಮ ಬಲೆಗೆ ಕೆಡವಿಕೊಂಡು ಹೊಸ ದೇಶೀ ತಳಿಯೊಂದನ್ನು ಸೃಷ್ಟಿಸಿ ಪೈಪೋಟಿ ನೀಡಿದರೆ ಹೇಗೆ?... ಎಂದು ಯೋಚಿಸಿ ಆ ನಿಟ್ಟಿನಲ್ಲಿ ಈಗಾಗಲೇ ಕಾರ್ಯಗತವಾಗಿರುವ ಬಗ್ಗೆ ಸುಳಿವು ಸಿಕ್ಕಿದೆ. ಹೀಗೆ ಕೈಲಾದಷ್ಟು ಅವೂ ಪ್ರತಿಭಟನೆಯ ಹಾದಿ ತುಳಿದಿರುವುದು ಸ್ಪಷ್ಟ.

ಹಾಗಾಗಿಯೇ ಯಾರಾದರೂ ಬೆಳಗಿನ ಹೊತ್ತು ವಿದೇಶಿ ಶ್ವಾನಗಳೊಂದಿಗೆ ಹೊರಬಂದರೆ ಬೀದಿನಾಯಿಗಳು ಅವುಗಳನ್ನು ಅಟಕಾಯಿಸಿಕೊಳ್ಳುತ್ತವೆ. ಗುಂಪು ಗುಂಪಾಗಿ ಅವುಗಳನ್ನು ಹಿಂಬಾಲಿಸುತ್ತವೆ. ತಮ್ಮ ಫಾರಿನ್ನು ಬ್ರೀಡುಗಳನ್ನು ರಕ್ಷಿಸಿಕೊಳ್ಳಲೆಂದೇ ಕೆಲ ಮಾಲೀಕರು ಸಪರೇಟು ಬೆತ್ತವೊಂದನ್ನು ತರುತ್ತಾರೆ. ವಾಕಿಂಗು ಸಮಯದಲ್ಲಿ ನಮ್ಮ ನಾಟಿ ಬೀದಿನಾಯಿಗಳಿಗೆ ಆ ಫಾರಂ ನಾಯಿಗಳು ಹೆದರಿ ಬಾಲ ಮುದುರಿಕೊಂಡು ತಮ್ಮ ಯಜಮಾನನ ಹಿಂದೆ ಅಡಗಿಕೊಳ್ಳಲೆತ್ನಿಸುತ್ತವೆ. ಈತ ಬೆತ್ತ ಹಿಡಿದು ಅವುಗಳನ್ನು ಕಾಪಾಡಲು ಹೆಣಗುತ್ತಿರುತ್ತಾನೆ.

ಮನುಷ್ಯ ಜಾತಿ ಕಂಡರಾಗದ ರೀತಿ ವರ್ತಿಸುತ್ತಿರುವ ನಾಯಿಗಳ ಈ ವರ್ತನೆ ಬಗ್ಗೆ ಮೊನ್ನೆ ಪ್ರಾಣಿಪ್ರಿಯರೊಬ್ಬರ ಬಳಿ ಮಾತನಾಡುತ್ತಿದ್ದೆ. ಬೇಸಿಕಲಿ ಶ್ವಾನಪ್ರೇಮಿಯಾದ ನಾನು ಅವುಗಳ ಈ ಬದಲಾದ ವರ್ತನೆ ಕುರಿತು ಚಿಂತಿತನಾದುದು ಸಹಜವೇ ಅಲ್ಲವೆ? ಹಾಗೆ ಚರ್ಚಿಸುವಾಗ ಹಲವು ವಿಷಯಗಳು ಬೆಳಕಿಗೆ ಬಂದವು. 'ಸಾರ್, ನಗರ ಬೆಳೆದಿದೆ, ನಾವು ಬದಲಾಗಿದ್ದೇವೆ. ನಿಜ ಹೇಳಿ, ನಮ್ಮಲ್ಲಿ ಮನುಷ್ಯತ್ವ ಇನ್ನೂ ಉಳಿದಿದೆಯಾ? ಮನುಷ್ಯತ್ವವನ್ನೇ ಮರೆತ ನಾವು ನಾಯಿಗಳಲ್ಲಿ ಮಾತ್ರ 'ನಾಯಿತ್ವ'ವನ್ನು ಹುಡುಕುವುದು ಎಷ್ಟು ಸರಿ? ಆಫ್ಟರಾಲ್ ಅವು ಕೇಳೋದು ನಮ್ಮ ಅಟೆನ್‌ಷನ್ನು, ಒಂದಷ್ಟು ಕಾಳಜಿ. ಅಷ್ಟನ್ನೂ ಕೊಡುವುದಕ್ಕೆ ನಮಗೆ ಸಮಯವಿಲ್ಲ. ನಡುವಿದ್ದ ಬಾಂಧವ್ಯ ಕೊಂಡಿಯನ್ನೇ ಕಳಚಿ ಬಿಸಾಡಿ ಬದಲಾದ ಅವುಗಳ ಬಗ್ಗೆ ಬರಿಯ ಕಾಮೆಂಟು ಮಾಡಿಕೊಂಡು ತಿರುಗುತ್ತೇವೆ. ಹಳ್ಳಿಗಳಲ್ಲಿ ಸದ್ಯಕ್ಕೆ ಆ ಪರಿಸ್ಥಿತಿಯಿಲ್ಲ. ಹಾಗಾಗಿ ಈ ಅತಿರೇಕಗಳಿಲ್ಲ ಅಷ್ಟೆ. ತಿದ್ದಿಕೊಳ್ಳಬೇಕಾದ್ದು ನಾವು, ಬಡಪಾಯಿ ನಾಯಿಗಳಲ್ಲ...' ಅನ್ನುತ್ತಿದ್ದರು. ಹೌದಲ್ಲಾ ಅನಿಸಿತು.


**ತುರುವೇಕೆರೆ ರವಿಶಂಕರ್**

ತಮ್ಮ ಪೊಲೀಸ್ ವೃತ್ತಿಯ ಅನುಭವಗಳ ಹಿನ್ನೆಲೆಯಲ್ಲಿ ಪ್ರಬಂಧಗಳನ್ನು ಬರೆಯುವ ರವಿಶಂಕರ್ ತುಮಕೂರು ಜಿಲ್ಲೆಯ ತುರುವೇಕೆರೆಯವರು. ಕೆಮಿಕಲ್ ಎಂಜಿನಿಯರಿಂಗ್ ಪದವೀಧರರಾಗಿರುವ ಅವರು ಪ್ರಸ್ತುತ ಬೆಂಗಳೂರಿನ ಬೊಮ್ಮನಳ್ಳಿ ಪೊಲೀಸ್ ಠಾಣೆಯಲ್ಲಿ ಇನ್‌ಸ್ಪೆಕ್ಟರ್ ಆಗಿದ್ದಾರೆ. 'ಪ್ರಜಾವಾಣಿ', 'ಸುಧಾ', 'ಮಯೂರ'ಗಳಲ್ಲಿ ಅವರ ಪ್ರಬಂಧಗಳು ಪ್ರಕಟವಾಗಿವೆ.